> ಒಂದಾದರ ನಂತರ ಮತ್ತೊಂದು ಶೂಲವನ್ನು ಎಸೆದು ಬೀರೀಯನ್ ಭೂಮಿಯಿಂದ ಆಕಾಶಕ್ಕೆ ಒಂದು ಮಾರ್ಗವನ್ನು ನಿರ್ಮಿಸಿದ. ಅದನ್ನು ಹಿಡಿದು ಅವನು ಮೇಲೆ, ಮತ್ತೂ ಮೇಲಕ್ಕೆ ಹೋಗಿ ಆಕಾಶವನ್ನು ಮುಟ್ಟಿದ. ಬುಲ್ಪೈ ಬುಲ್ಪೈ ಅವರನ್ನು ಹುಡುಕತೊಡಗಿದ.

ಅಲ್ಲಿದ್ದ ದೋಣಿಯನ್ನು ತಾವೇ ಚಲಿಸಿ ವೀಡಾನನ್ನು ಮುಟ್ಟೋಣ ಎಂಬ ಬಯಕೆ ಅವರಿಗೆ.

ಆದರೆ, ಅವರಿಗೆ ಎಲ್ಲಿಲ್ಲದ ಆಶ್ಚರ್ಯ ಕಾದಿತ್ತು. ದೋಣಿಯಲ್ಲಿ ಈಗ ಇದ್ದದ್ದು ಮತ್ತಾರೂ ಅಲ್ಲ, ಬೀರೀಯನ್! ತಾವಿಬ್ಬರೂ ಯಾರಿಂದ ತಪ್ಪಿಸಿಕೊಂಡು ಓಡಿಬಂದಿದ್ದರೋ ಅದೇ ವೈರಿ ಬೀರೀಯನ್! ಅವರಿಗೂ ವೀಡಾನಿಗೂ ಮಧ್ಯೆ ಈಗ ನದಿ ಬೇರೆ. ದಾರಿ ಕಾಣದಾಯಿತು. ಅವರಿಗೆ ಅರಿವೇ ಇಲ್ಲ, ಬೀರೀಯನ್ ಸದಾ ಅವರ ಹತ್ತಿರವೇ ಇದ್ದು ಹಿಂಬಾಲಿಸುತ್ತಿದ್ದ. ಬಾಯಾರಿಕೆಯಾಗಿ ಇಬ್ಬರೂ ಸಾಯಲಿ ಎಂದು, ದಾರಿಯುದ್ದಕ್ಕೂ ಮರೀಚಿಕೆಗಳನ್ನು ನಿರ್ಮಿಸಿದ್ದು ಅವನೇ. ಅವರ ಬಂಧು ಡೂಲೂಮೈ ಅವರನ್ನು ಕಾಪಾಡಿದ್ದು ನಿಜ. ಅದು ಬೇರೆ ಮಾತು. ಆದರೆ, ಇದು ಮಾತ್ರ ಬೀರೀಯನ್ನನ ಸುಸಮಯವಾಗಿತ್ತು.

ಬುಲ್ಪೈ ಬುಲ್ಪೈ ನದಿಯ ದೂರತೀರವನ್ನು ನೋಡಿದರು. ಅಲ್ಲಿ ವೀಡಾ ಹುಲ್ಲಿನ ಮನೆಯನ್ನು ಕಟ್ಟಿದ್ದ. ಆದರೆ, ಅವನು ಮನೆಯಿಂದ ಮತ್ತೆ ಮತ್ತೆ ಹೊರಬಂದು, ಮತ್ತೆ ಮತ್ತೆ ಒಳಹೋಗುತ್ತಿದ್ದ, ಹುಚ್ಚನಂತೆ. ಆ ಮನೆಗೆ ಎರಡು ಬಾಗಿಲುಗಳು, ಹಿಂದೊಂದು, ಮುಂದೊಂದು! ಎರಡೂ ತೆರೆದಿದ್ದ ಹಾಗಿತ್ತು. ಇವರಿಗೆ ಏಕೆಂಬುದು ಅರ್ಥವಾಗಲಿಲ್ಲ.

ಅವರಿಬ್ಬರು ಅತ್ತ ದಿಟ್ಟಿಸಿ ನೋಡುತ್ತಿದ್ದುದನ್ನು ಕಂಡ ಬೀರೀಯನ್ ಹೇಳಿದ, "ವೀಡಾ ಈಗ ಒಬ್ಬ ವೊಂಬಾ (ಹುಚ್ಚ), ಕಿವುಡ. ಅವನು ಮಲಗಿದ್ದಾಗ ಅವನ ಡೂವೀಯನ್ನು (ಮಂತ್ರದಂಡ) ನಾನು ಕದ್ದು, ಅದರ ಸ್ಥಳದಲ್ಲಿ ಒಂದು ಹುಚ್ಚು ದೆವ್ವವನ್ನು ಇರಿಸಿದೆ. ಅವನಿಗೆ ಈಗ ನೀವಾರು ಎಂಬುದು ಗೊತ್ತಿಲ್ಲ. ಅವನಿಗೆ ನೀವು ಈಗ ಬೇಕೂ ಇಲ್ಲ. ಈರ್–ಧೀರ್ (ಮರೀಚಿಕೆ) ಅಥವಾ ಮರೀಚಿಕೆಯನ್ನು ಬಹುವಾಗಿ ನೋಡಿದವರ ಗತಿ ಇಷ್ಟೆ. ಅವನು ಇನ್ನು ನನಗೆ ಯಾವ ತೊಂದರೆಯನ್ನೂ ಕೊಡುವುದಿಲ್ಲ. ನಿಮಗೂ ಅಷ್ಟೆ. ಅವನತ್ತ ಏಕೆ ನೋಡುತ್ತೀರಿ?"

ಆದರೆ, ಬುಲ್ಪೈ ಬುಲ್ಪೈ ಅವರಿಗೆ ವೀಡಾನನ್ನು ನೋಡದಿರುವುದು ಅಸಾಧ್ಯ ಎನಿಸಿತು. ಅವನಾದರೋ ಮತ್ತೆ ಒಂದು ಬಾಗಿಲಿನಿಂದ ಹೊರಬಂದು, ಮತ್ತೊಂದರ ಮೂಲಕ ಒಳಹೋಗುತ್ತಿದ್ದ.

ಅವರೆಂದರು, "ಅವನೊಬ್ಬ ವೊಂಬಾ". ಅದರೂ ಅವರಿಗೆ ಏನೂ ಅರ್ಥವಾಗಲಿಲ್ಲ. ಅವನನ್ನು ಹೆಸರುಹಿಡಿದು ಕರೆದರು. ಉತ್ತರವಿಲ್ಲ.

ಬೀರೀಯನನಿಗೆ ಕೋಪಬಂದು, "ಅವನನ್ನು ನಿಮ್ಮಿಂದ ದೂರ ಕಳಿಸುತ್ತೇನೆ". ಎಂದವನೇ ಒಂದು ಈಟಿಯನ್ನು ತೆಗೆದುಕೊಂಡು, ದೋಣಿಯನ್ನೇರಿ ನಿಂತು ವೀಡಾನತ್ತ ಎಸೆದ. ಅದು ವೇಗವಾಗಿ ಗಾಳಿಯಲ್ಲಿ ಚಲಿಸಿ ವೀಡಾನನ್ನು ಇರಿಯಿತು. ಅವನು, "ಅಲ್ಲಿ ನೀರಿದೆ, ಅಲ್ಲಿ ನೀರಿದೆ" ಎಂದು ಕಿರುಚುತ್ತಾ ಬಿದ್ದು ಸತ್ತುಹೋದ.